ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 3, Nov-Dec 2021, 68-72**
**©*IIMRD*, Mysuru**
IIMRD JOURNALS
**www.iimrd.com**

# ಹೆಗ್ಗಡದೇವನ ಕೋಟೆ ಪ್ರದೇಶದ ಶಾಸನೋಕ್ತ ಊರುಳಿವಿನ ವೀರಗಲ್ಲು ಶಾಸನಗಳು

**ಡಾ. ಶ್ರೀನಿವಾಸ. ವಿ* ಮತ್ತು ಸಿದ್ದಯ್ಯ****

* ಇತಿಹಾಸ ಸಂಶೋಧಕರು, ಬೋಗಾದಿ, ಮೈಸೂರು
**ಸಂಶೋಧನಾ ವಿದ್ಯಾರ್ಥಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.

***ಸಾರಾಂಶ* (Abstract)**

*ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ವೀರತ್ವಕ್ಕೆ ಒಂದು ಪ್ರಮುಖವಾದ ಸ್ಥಾನವಿತ್ತು. ಗ್ರಾಮಗಳ ರಕ್ಷಣೆಗಾಗಿ, ಗೋರಕ್ಷಣೆಗಾಗಿ, ನಾಡಿನ ರಕ್ಷಣೆಗಾಗಿ, ರಾಜರ ಪರವಾಗಿ ತನ್ನ ಋಣ ತೀರಿಸಲು ಹೋರಾಡುವುದು, ಬೇಟೆಯಾಡುವುದು, ದುಷ್ಟ ಮೃಗಗಳ ಜೊತೆ ಹೋರಾಟ ಮಾಡಿರುವುದು ತಿಳಿದುಬರುತ್ತದೆ. ಪ್ರಸ್ತುತ ಲೇಖನದಲ್ಲಿ ಊರುಳಿವಿನ ಶಾಸನಗಳು ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಕಂಡು ಬಂದಿರಿವುದರಿಂದ ಹೆಗ್ಗಡದೇವನಕೋಟೆ ಪ್ರದೇಶದ ಚಾರಿತ್ರಿಕ ಭೂಗೋಳ ಮತ್ತು ಸಾಂಸ್ಕೃತಿಕ ಪರಂಪರೆಯ ವಿಕಾಸದ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.*

***ಮುಖ್ಯಪದಗಳು* (Keywords):** ಊರುಳಿವಿನ ವೀರಗಲ್ಲು, ಶಾಸನಗಳು, ಶಿಲ್ಪಗಳು, ಹೆಗ್ಗಡದೇವನ ಕೋಟೆ.

## ಪೀಠಿಕೆ

ಪ್ರಾಚೀನ ಕಾಲದಲ್ಲಿ ಗೆದ್ದ ರಾಜನು ತಾನು ಗೆದ್ದ ಪ್ರದೇಶಗಳನ್ನು ಲೂಟಿ ಮಾಡುವ ಕೃತ್ಯದಲ್ಲಿ ತೊಡಗುತ್ತಿದ್ದಾಗ ಸ್ಥಳೀಯ ವೀರರು ನಡೆಸುತ್ತಿದ್ದ ಹೋರಾಟವನ್ನು ಇದು ತಿಳಿಸುತ್ತದೆ. ಇದು ಊರಿನ ನಾಶವನ್ನು ಹೇಳುತ್ತದೆ. ಇದನ್ನು ಶಾಸನಗಳು 'ಊರುಳಿವು', 'ಊರು ಹುಯ್ಯಲು' ಎಂದು ಕರೆದಿವೆ.[1] ಕಳ್ಳರು ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ, ಊರನ್ನು ನಾಶಪಡಿಸುತ್ತಿದ್ದರು. ಕಳ್ಳರು ಊರಿಗೆ ನುಗ್ಗಿ, ಸಂಪತ್ತನ್ನು ಅಪಹರಿಸಿ, ಊರಿಗೆ ಬೆಂಕಿಯಿಡುತ್ತಿದ್ದರು.[2] ಹೀಗೆ ನಾನಾ ಕಾರಣಗಳಿಗಾಗಿ ಶೌರ್ಯವನ್ನು ಪ್ರದರ್ಶಿಸಿರುವುದು ಸಾವಿರಾರು ಶಾಸನಗಳಿಂದ ತಿಳಿದು ಬರುತ್ತದೆ.

ಹೆಗ್ಗಡದೇವನಕೋಟೆ ತಾಲೂಕಿನ ಈಶಾನ್ಯ ದಿಕ್ಕಿನಲ್ಲಿ ಸುಮಾರು 15.ಕಿ.ಮೀ ದೂರದಲ್ಲಿ ಹಂಪಾಪುರ ಹೋಬಳಿಗೆ ಸೇರಿದ ಹಿರೇನಂದಿ ಎಂಬ ಗ್ರಾಮವಿದೆ. ಈ ಗ್ರಾಮದ ಸೋಮೇಶ್ವರ ದೇವಾಲಯದ ಮುಂದೆ ಗಂಗರ ಕಾಲದ ಊರುಳಿವಿನ ವೀರಗಲ್ಲು ಶಾಸನವಿದೆ. ಪೂರ್ವಕ್ಕೆ ಮುಖ ಮಾಡಿರುವ ಗ್ರ್ಯಾನೈಟ್ ಶಿಲೆಯ ಮೇಲೆ 18 ಸಾಲುಗಳ ಕನ್ನಡ ಭಾಷೆಯ ಶಾಸನವನ್ನು ಕೆತ್ತಲಾಗಿದೆ. ಈ ಶಾಸನ ಕ್ರಿ.ಶ. 10ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಎರೆಯಪ್ಪನ ಮರಣಾನಂತರ ಆತನ ರಾಜ್ಯ ಮತ್ತು ಭಂಡಾರದಲ್ಲಿ ಅರ್ಧಭಾಗವನ್ನು ಕಿರಿಯ ರಾಚಮಲ್ಲನಿಂದ ಬಲತ್ಕಾರದಿಂದ ಪಡೆಯಬಹುದೆಂಬ ನಂಬಿಕೆಯಿಂದ ಭುವನಾದಿತ್ಯನು ಬಯಲು

*Please cite this article as: ಶ್ರೀನಿವಾಸ. ವಿ ಮತ್ತು ಸಿದ್ದಯ್ಯ. (2021).* ಹೆಗ್ಗಡದೇವನ ಕೋಟೆ ಪ್ರದೇಶದ ಶಾಸನೋಕ್ತ ಊರುಳಿವಿನ ವೀರಗಲ್ಲು ಶಾಸನಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 68–72*

ನಾಡಿಗೆ ಆಗಮಿಸಿದನು. ಆದರೆ ರಾಚಮಲ್ಲನ ಐವರು ಸಾಮಂತರು ಮತ್ತು ಹೆಗ್ಗಡೆಗಳು ಬಯಲು ನಾಡನ್ನು ರಾಚಮಲ್ಲನ ಹೊರತು ಬೇರೆ ಯಾರೊಬ್ಬರು ಆಳಲು ಬಿಡುವುದಿಲ್ಲವೆಂದು ಭುವನಾದಿತ್ಯನನ್ನು ವಿರೋಧಿಸಿದರು. ಇದರ ಪರಿಣಾಮವಾಗಿ ಮಾಗುಂದಿಯಲ್ಲಿ ನಡೆದ ಕದನದಲ್ಲಿ ನಂದಿಯ ಕೊರನ್ತಿಯರಸರ ನಾಲ್ವರು ಮಕ್ಕಳು ಮೃತರಾದಾಗ ಈ ವಿಷಯವನ್ನು ಬೀರಯ್ಯನಿಂದ ಬರೆಸಿ ಕಲಿಗರಯ್ಯ ಕಲ್ಲನ್ನು ನೆಡಿಸಿದ ಬಗ್ಗೆ ಈ ದಾಖಲೆ ತಿಳಿಸುತ್ತದೆ.[3]

ಶಾಸನೋಕ್ತ ಎರೆಯಪ್ಪನು ಎರಡನೇ ನೀತಿಮಾರ್ಗ ಎರೆಗಂಗನಾಗಿರಬಹುದೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಎರೆಯಪ್ಪನ ಮರಣ ಮತ್ತು ಆ ನಂತರ ಉಂಟಾದ ರಾಜಕೀಯ ಪರಿಣಾಮಗಳನ್ನು ಈ ದಾಖಲೆ ತಿಳಿಸುತ್ತದೆ. ಎರೆಯಪ್ಪನಿಗೆ ನರಸಿಂಹ, ಮೂರನೇ ರಾಚಮಲ್ಲ ಹಾಗೂ ಇಮ್ಮಡಿ ಬೂತುಗ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ನರಸಿಂಹ ಕೆಲಕಾಲ ಆಳಿದ ನಂತರ ರಾಚಮಲ್ಲ ಪಟ್ಟಾಭಿಷಿಕ್ತನಾದನು. ಮುಂದೆ ಬೂತುಗ ರಾಷ್ಟ್ರಕೂಟ ದೊರೆ ಮೂರನೇ ಕೃಷ್ಣನ ಸೇನಾ ನೆರವಿನಿಂದ ರಾಚಮಲ್ಲನನ್ನು ಕೊಂದು ಅಧಿಕಾರಕ್ಕೆ ಬಂದನು. ಈ ಘಟನೆಗೂ ಮೊದಲು ಬೂತುಗ ಅರ್ಧ ರಾಜ್ಯದ ಬೇಡಿಕೆಯೊಡನೆ ಭುವನಾದಿತ್ಯ ಎಂಬ ತನ್ನ ಅಧಿಕಾರಿಯನ್ನು ಕಳುಹಿಸಿರಬಹುದು. ರಾಚಮಲ್ಲನ ಸಾಮಂತರು, ಹೆಗ್ಗಡೆಗಳು ಪ್ರತಿಭಟಿಸಲಾಗಿ ಭುವನಾಧಿತ್ಯನು ಅವರೊಡನೆ ಯುದ್ಧ ಮಾಡಬೇಕಾಗಿರಬಹುದು. ನೆಲಕ್ಕಾಗಿ ನಡೆದ ಈ ಹೋರಾಟವನ್ನು ನೆಲದುಳಿವು ಎಂದಿರುವುದು ಉಚಿತವಾಗಿದೆ.

ಹೆಗ್ಗಡದೇವನಕೋಟೆ ತಾಲೂಕು ಕೇಂದ್ರದ ನೈರುತ್ಯಕ್ಕೆ 12 ಕಿ.ಮೀ. ದೂರದಲ್ಲಿ ಕಸಬಾ ಹೋಬಳಿಗೆ ಸೇರಿದ ಅಂಕನಾಥಪುರ ಎಂಬ ಗ್ರಾಮವಿದೆ. ಈ ಗ್ರಾಮದ ಉತ್ತರಭಾಗದಲ್ಲಿರುವ ಅರ್ಕೇಶ್ವರ ದೇವಾಲಯದ ಮುಂದೆ ಚೋಳರ ಕಾಲದ ವೀರಗಲ್ಲು ಶಾಸನವಿದೆ. ಈಗ ಅರ್ಕೇಶ್ವರ ದೇವಾಲಯವು ಸಂಪೂರ್ಣ ನಾಶವಾಗಿದ್ದು, ಅದು ಇದ್ದ ಬಗ್ಗೆ ಯಾವ ಕುರುಹು ಇಲ್ಲದಾಗಿದೆ ಹಾಗೂ ಗ್ರಾಮದ ಜನರಲ್ಲೂ ದೇವಾಲಯವಿದ್ದ ಬಗ್ಗೆ ಮಾಹಿತಿ ಕೂಡ ಇಲ್ಲವಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೃಹದಾಕಾರದ ಬೇಲಿಯ ಒಳಗೆ ಶಾಸನಕಲ್ಲು ಪತ್ತೆಯಾಯಿತು. ಇದರ ಆಧಾರದ ಮೇಲೆ ದೇವಾಲಯವಿದ್ದ ಸ್ಥಳವನ್ನು ಗುರುತಿಸಬಹುದಾಗಿದೆ. ದೇವಾಲಯ ಪೂರ್ವಾಭಿಮುಖವಾಗಿದ್ದು, ಇದರ ಮುಂಭಾಗದಲ್ಲಿ ಲಿಂಗ, ನಂದಿ, ಸೂರ್ಯಚಂದ್ರರ ಶಿಲ್ಪಗಳೊಡನೆ ಪ್ರಾರಂಭಿಸಿ 9 ಸಾಲುಗಳು ಹಾಗೂ ಹಿಂಭಾಗದಲ್ಲಿ 12 ಸಾಲುಗಳ ಕನ್ನಡ ಭಾಷೆಯ ಶಾಸನವಿದೆ. ಇದು ಕ್ರಿ.ಶ.1037ಕ್ಕೆ ಸೇರಿದ ಶಾಸನವಾಗಿದೆ.

ಶ್ರೀ ಮುಡಿಗೊಂಡ–ಗಂಗಗೊಂಡ–ರಾಜೇಂದ್ರ ಚೋಳದೇವರ ಆಳ್ವಿಕೆಯ ಇಪ್ಪತ್ತಾರನೇ ವರ್ಷದಲ್ಲಿ ನವಿಲೆನಾಡಿನಲ್ಲಿ ಕೂಡಲೂರಿನ ನಿಗಳಂಕಮಲ್ಲ ಚಂಗಾಳ್ವನು ಮುತ್ತಿಗೆ ಹಾಕಿದಾಗ ಕಲಿಗೋಟೆಮಲ್ಲರು ಹಾಗೂ ತೊಲಗದಗಂಡರೆನಿಸಿದ ಅಜ್ಜಣಗಾವುಂಡನ ಮಕ್ಕಳಾದ ಜೋಗಗಾವುಂಡ, ಅಕಗಾವುಂಡ, ಭವಗಾವುಂಡ, ಚಾವಗಾವುಂಡ, ಬಸಗಾವುಂಡ, ಕೇತಗಾವುಂಡರು ಆತನನ್ನು ಎದುರಿಸಿದ ಸಂದರ್ಭದಲ್ಲಿ ಭುವಗಾವಂಡ ಮತ್ತು ಬಸಗಾವುಂಡರು ಸತ್ತಾಗ ಪರ್ವಲಯದ ನಾಡಗಾವುಂಡರೆನಿಸಿದ ಕುರುವನ್ದ ಪೆರ್ಮಾಡಿಗಾವುಂಡ, ಏಚಗಾವುಂಡ, ಕೊಂಗುಣಿಗಾವುಂಡ, ತ್ಬುಣ್ಬ್ವಗೆಯ (ತುಂಬಸೋಗೆ) ಕರಿಯಮ್ಮ, ಮಲೆಏರಿನ (ಮಲ್ಲಾರ) ಬೀಚಗಾವುಂಡ, ಪೈರಗೆಯ (ಹೈರಿಗೆ) ನಾಚಗಾವುಂಡ, ಸೈವಯೆಸ್ಪಿಯಮ,

ಯಟ್ಟೂಳದ ರಾಜಯ್ಯ, ಕೊಳಿಗಾಲದ ಗಂಗಯ್ಯ ಈ ಮುನ್ನೂರ್ವರು ಹಾಗೂ ಪೆಲರ್ಮಚ್ಚಿಗಂಡ, ತೆಲುಗರಮಾರಿ ಎಂಬ ಬಿರುದುಗಳನ್ನೊಂದಿದ್ದ ಮಹಾದಂಡನಾಯಕ  ಪಂಚವಮಾರಾಯನು ಮೆಚ್ಚಿ ಅಕಗಾವುಂಡನಿಗೆ ಪೆಲರ್ಮಚ್ಚಿ ಗಾವುಂಡನೆಂದು, ಭವಗಾವುಂಡನಿಗೆ ತೆಲುಗರಮಾರಿ ಗಾವುಂಡನೆಂದು ಪಟ್ಟಕಟ್ಟಿ ನಾಗಮಂಗಲವನ್ನು ಅದರ ಸರ್ವವ್ಯವಹಾರ ಸಮೇತವಾಗಿ ಕಲ್ನಾಡಾಗಿ ಬಿಟ್ಟ ಬಗ್ಗೆ ಈ ದಾಖಲೆ ತಿಳಿಸುತ್ತದೆ.

ಶಾಸನೋಕ್ತ ದೊರೆಯು ಒಂದನೇ ರಾಜೇಂದ್ರ ಚೋಳನಾಗಿದ್ದು, ಈತನಿಗೆ ಪಂಚವನ್ ಮಾರಾಯ ಎಂಬ ಬಿರುದಿತ್ತೆಂದು ರಾಜರಾಜ ಚೋಳನ ಮಾಲಾಂಬಿ ಶಾಸನದಿಂದ ತಿಳಿದುಬರುವುದರಿಂದ ಪ್ರಸ್ತುತ ಶಾಸನದಲ್ಲಿ ಬರುವ ಪಂಚವನ್ ಮಾರಾಯನನ್ನು ರಾಜೇಂದ್ರ ಚೋಳನೆಂದು ಗುರುತಿಸಲು ಅವಕಾಶವಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈತನನ್ನು ಮಹಾದಂಡನಾಯಕನೆಂದು ಸಂಬೋಧಿಸಿರುವುದರ ಕಾರಣ ತಿಳಿಯಲು ಆಧಾರಗಳು ದೊರೆತಿಲ್ಲ. ಕ್ರಿ.ಶ.1037ರಲ್ಲಿ ಚಂಗಾಳ್ವರು ಚೋಳರ ಅಧೀನದಲ್ಲಿದ್ದ ನಾಡನ್ನು ಮುತ್ತಿದರೆಂಬ ವಿಷಯ ಪ್ರಸ್ತಾಪವಿರುವುದರಿಂದ ಈ ಶಾಸನದ ಕಾಲದ ವೇಳೆಗೆ ಚಂಗಾಳ್ವರು ಇನ್ನೂ ಸ್ವತಂತ್ರವಾಗಿಯೇ ಇದ್ದರೆಂಬುದು ಸ್ಪಷ್ಟವಾಗುತ್ತದೆ. ಚೋಳರು ವೀರರಿಗೆ, ಸಮಾಜ ಸೇವಕರಿಗೆ, ರಾಜ್ಯಾಧಿಕಾರಿಗಳಿಗೆ, ರಾಜ್ಯಕ್ಕಾಗಿ ಮಡಿದವರಿಗೆ ವಿಶೇಷ ಗೌರವ ನೀಡುತ್ತಿದ್ದರು. ವೀರಕೊಡುಗೆಗಳನ್ನು ನೀಡುತ್ತಿದ್ದರು, ಬಿರುದುಗಳನ್ನು ದಯಪಾಲಿಸುತ್ತಿದ್ದರು, ರಾಜ ಚಿಹ್ನೆಗಳನ್ನು ಬೋಗಿಸಲು ನೀಡುತ್ತಿದ್ದರು, ಚೋಳರ ರಾಜ್ಯದಲ್ಲಿ ಬ್ರಹ್ಮದೇಯ ಮತ್ತು ದೇವದತ್ತಿಗಳಿಗಿಂತ ವೀರಗೊಡುಗೆಗಳು ಮಹತ್ವದ್ದಾಗಿದ್ದವು. ಪ್ರಸ್ತುತ ಶಾಸನದಲ್ಲೂ ಪಂಚವಮಾರಾಯನು ಮೆಚ್ಚಿ ಅಕಗಾವುಂಡನಿಗೆ ಪೆಲರ್ಮಚ್ಚಿ ಗಾವುಂಡನೆಂದು, ಭವಗಾವುಂಡನಿಗೆ ತೆಲುಗರಮಾರಿ ಗಾವುಂಡನೆಂದು ಪಟ್ಟಕಟ್ಟಿ ಗಾವುಂಡಕೊಡುಗೆಗಳನ್ನು ನೀಡಿದನಲ್ಲದೆ ನಾಗಮಂಗಲವನ್ನು ಅದರ ಸರ್ವವ್ಯವಹಾರ ಸಮೇತವಾಗಿ ಕಲ್ನಾಡಾಗಿ ಬಿಟ್ಟಿರುವುದು ತಿಳಿದುಬಂದಿದೆ.[4]

ಹೆಗ್ಗಡದೇವನಕೋಟೆ ತಾಲೂಕು ಸೋಗಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲಿ ವೀರಗಲ್ಲು ಶಾಸನ–ಶಿಲ್ಪವೊಂದಿದೆ. ಪೂರ್ವಾಭಿಮುಖವಾಗಿರು ಗ್ರ್ಯಾನೈಟ್ ಶಿಲೆಯ ಮೇಲೆ ಮೂರು ಹಂತಗಳ ಶಿಲ್ಪಗಳಿವೆ. ಇದು ಕ್ರಿ.ಶ.ಸುಮಾರು 15ನೇ ಶತಮಾನಕ್ಕೆ ಸೇರುತ್ತದೆ. ಸೋಗಹಳ್ಳಿ ಹಾಗೂ ಸಿಂಗಪಟ್ಟಣಗಳ ನಡುವಣ ಯುದ್ಧದಲ್ಲಿ ಹೋರಾಡಿ ಮಡಿದ ಬಯನ ಮಾದಗೆ ಯೀರಗಲ್ಲು ನಿಲ್ಲಿಸಿದ ಬಗ್ಗೆ ಈ ದಾಖಲೆ ತಿಳಿಸುತ್ತದೆ. ಶಾಸನೋಕ್ತ ಸಿಂಗಪಟ್ಟಣವು ಪ್ರಸ್ತುತ ಕಂದಲಿಕೆ ಹೋಬಳಿಯ ಮೊಸರಹಳ್ಳ ಗ್ರಾಮವಾಗಿದೆ. ಸ್ಮಾರಕ ಶಿಲೆಯಲ್ಲಿ ಶಾಸನಕ್ಕೆ ಪೂರಕವಾದ ಮೂರು ಹಂತಗಳ ಶಿಲ್ಪಗಳಿದ್ದು, ಮೊದಲ ಹಂತದ ಬಲದಲ್ಲಿ ಪ್ರತ್ಯಾಲೀಢಾಸನದಲ್ಲಿ ನಿಂತು, ಎಡಗೈಯಲ್ಲಿ ದುಂಡಾದ ಗುರಾಣಿ ಹಿಡಿದು, ಬಲಗೈಯಲ್ಲಿ ಈಟಿ ಹಿಡಿದ ಯೋಧನ ಶಿಲ್ಪವಿದ್ದು, ಈತನನ್ನು ವೀರಗಲ್ಲಿನ ನಾಯಕ ಬಯನ ಮಾದಗೆ ಎಂದು ಗುರ್ತಿಸಲಾಗಿದೆ. ಈತನ ಮುಂದೆ ಆಲೀಢಾಸನದಲ್ಲಿ ನಿಂತು ಬಲಗೈಯಲ್ಲಿ ಗುರಾಣಿ ಎಡಗೈಯಲ್ಲಿ ಈಟಿ ಹಿಡಿದು ಹೋರಾಡುತ್ತಿರುವ ಶತ್ರು ಯೋಧನ ಶಿಲ್ಪವಿದೆ. ವೀರರಿಬ್ಬರೂ ಸಮತಲ ನೆರಿಗೆಯಿಂದ ಕೂಡಿದ ವೀರಗಚ್ಚೆ, ಕಟಿಬಂಧ, ಉಡಿಯಲ್ಲಿ ಕಟ್ಟಿದ ಒರೆಸಹಿತ ಕಿರುಗತ್ತಿ, ಕಂಕಣ, ಬಾಹುಬಂಧ, ಕಾಲ್ಗಡಗ, ಕಂಠಿಹಾರ, ತಲೆಯ ಹಿಂಭಾಗದಲ್ಲಿ ಕಟ್ಟಿದ ವೀರಮುಡಿಗಳಿಂದ ಭೂಷಿತರಾಗಿದ್ದಾರೆ. ಎರಡನೇ ಹಂತದಲ್ಲಿ

ಅಪ್ಸರೆಯರ ಹೆಗಲ ಮೇಲೆ ಕೈಗಳನ್ನು ಹಾಕಿ ಸ್ವರ್ಗಯಾನದಲ್ಲಿರುವ ಬಯನಮಾದಗೆಯ ಶಿಲ್ಪವಿದೆ. ಮೂರನೇ ಹಂತದಲ್ಲಿ ವೀರಾಸನದಲ್ಲಿ ಕುಳಿತ ಬಯನ ಮಾದಗೆಯ ಎಡಬಲದಲ್ಲಿ ಸೇವಾನಿರತ ಅಪ್ಸರೆಯರ ಶಿಲ್ಪಗಳಿವೆ. ಶಿಲೆಯ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ರೇಖಾ ಚಿತ್ರಗಳಿವೆ.[5]

ಹೆಗ್ಗಡದೇವನಕೋಟೆ ತಾಲೂಕು ಸೋಗಳ್ಳಿ ಗ್ರಾಮದ ದ್ವಾರದಲ್ಲಿ ರಸ್ತೆಯ ಬಲಕ್ಕೆ ಮನೆಯೊಂದರ ಮುಂದೆ ವೀರಗಲ್ಲು ಶಾಸನ–ಶಿಲ್ಪವೊಂದಿದೆ. ಪೂರ್ವಾಭಿಮುಖವಾಗಿರುವ ಕಪ್ಪು ಮರಳುಗಲ್ಲಿನ ಮೇಲೆ ಮೂರು ಹಂತಗಳ ಶಿಲ್ಪಗಳಿವೆ. ಕ್ರಿ.ಶ.ಸುಮಾರು 16ನೇ ಶತಮಾನಕ್ಕೆ ಸೇರುತ್ತದೆ. ಸೋಗಹಳ್ಳಿ ಹಾಗೂ ಸಿಂಗಪಟ್ಟಣಗಳ ನಡುವನ ಹೋರಾಟದಲ್ಲಿ ಮಡಿದ ಕಾಳಗಿತೆಗೆ ಸೂರಬೋಯ ಯೀರಗಲ್ಲು ನಿಲ್ಲಿಸಿದ ಬಗ್ಗೆ ಈ ದಾಖಲೆ ತಿಳಿಸುತ್ತದೆ.  ಸ್ಮಾರಕ ಶಿಲೆಯಲ್ಲಿ ಶಾಸನಕ್ಕೆ ಪೂರಕವಾದ ಮೂರು ಹಂತಗಳ ಶಿಲ್ಪಗಳಿದ್ದು, ಮೊದಲ ಹಂತದಲ್ಲಿ ಕೊಂತದ ವೀರರಿಬ್ಬರ ಹೋರಾಟದ ಶಿಲ್ಪಗಳಿವೆ. ಬಲ ಭಾಗದಲ್ಲಿ ಎಡಗೈಯಲ್ಲಿ ದುಂಡು ಗುರಾಣಿಯನ್ನು, ಬಲಗೈಯಲ್ಲಿ ಕೊಂತವನ್ನು ಎತ್ತಿ ಹಿಡಿದು ಪ್ರತ್ಯಾಲೀಢಾಸನದಲ್ಲಿರುವ ಯೋಧನ ಶಿಲ್ಪವಿದ್ದು, ಈತನೇ ವೀರಗಲ್ಲಿನ ನಾಯಕ ಕಾಳಗಿತನೆಂದು ಗುರ್ತಿಸಲಾಗಿದೆ. ಈತನ ಮುಂದೆ ಆಲೀಢಾಸನದಲ್ಲಿ ನಿಂತ ಶತ್ರುಯೋಧನು ಎದೆಯ ಬಳಿ ದುಂಡು ಗುರಾಣಿ ಹಿಡಿದು, ಕೊಂತದಿಂದ ಕಾಳಗಿತನ ಅಸಂವೃತವಾದ ಎಡಭುಜಕ್ಕೆ ಇರಿಯುತ್ತಿದ್ದಾನೆ. ಮೇಲಿನ ಇಬ್ಬರು ವೀರರು ಕೊಂತಾಯುಧವನ್ನು ಹಿಡಿದಿದ್ದು, ಇದು ವೀರಗಲ್ಲು ಶಿಲ್ಪದಲ್ಲಿ 7 ಹಸ್ತಗಳಷ್ಟು ಉದ್ದವಿದೆ. ಕೊಂತವು ಸುಮಾರು 5, 6 ಅಥವಾ 7 ಹಸ್ತ ಉದ್ದವುಳ್ಳ ಒಂದು ದಂಡವೆಂಬ ಅರ್ಥಶಾಸ್ತ್ರದ ವ್ಯಾಖ್ಯಾನ ಸತ್ಯಕ್ಕೆ ಹತ್ತಿರವಿದ್ದಂತಿದೆ. ಯೋಧರು ಗುರಾಣಿ–ಕೊಂತಗಳನ್ನಿಡಿದಿದ್ದು, ಕೊಂತವನ್ನು ಗುರಾಣಿಯೊಡನೆ ಬಳಸಲಾಗುತ್ತಿತ್ತು ಎಂಬುದಕ್ಕೆ ಶಾಸನಾಧಾರವಿದೆ. ಶಿಲ್ಪದಲ್ಲಿ ಕೊಂತದ ಎರಡೂ ತುದಿಗಳು ಈಟಿ ಹಾಗೂ ಭರ್ಜಿಯ ಮೊನೆಗಳಂತೆ ಚೂಪಾಗಿದ್ದು ಕೊಂತವು ಭರ್ಜಿಯಂತೆ ಇರಿಯುವ ಮತ್ತು ಈಟಿಯಂತೆ ನಾಟುವ ಆಯುಧವಾಗಿತ್ತು ಎಂಬುದು ಶಾಸನಾಧಾರಗಳಿಂದ ತಿಳಿದಿದೆ. ಯೋಧರು ಸಮಾರು 7 ಹಸ್ತಗಳಷ್ಟು ಉದ್ದವಿರುವ ಕೊಂತವನ್ನು ಅದರ ನಡುಭಾಗದಲ್ಲಿ ಹಿಡಿದಿದ್ದು, ಎಡಕ್ಕೆ 3 ಹಸ್ತ ಬಲಕ್ಕೆ 3 ಹಸ್ತ ಉದ್ದವಿದೆ. ಇದರ ಒಂದು ತುದಿ ಈಟಿಯ ಮೊನೆಯಂತೆ ಇನ್ನೊಂದು ತುದಿ ಸೂಜಿ ಭರ್ಜಿಯಂತೆ ಚೂಪಾಗಿವೆ. ಹೀಗಾಗಿ ಕೊಂತವು ಕಬ್ಬಿಣದ ಚೂಪಾದ ಭರ್ಜಿ ಹಾಗೂ ಈಟಿಯ ಮೊನೆಗಳನ್ನು ತೊಟ್ಟ 5, 6, ಅಥವಾ 7 ಹಸ್ತಗಳಷ್ಟು ಉದ್ದವಿರುವ ಮರದ ದಂಡವಾಗಿದೆ. ಇದನ್ನು ಹತ್ತಿರದ ಶತ್ರುವನ್ನು ಇರಿಯಲು ಹಾಗೂ ದೂರದ ಶತ್ರುವಿಗೆ ನಾಟುವಂತೆ ಎಸೆಯಲು ಬಳಸಿರಲೂ ಸಾಕು. ವೀರರಿಬ್ಬರೂ ಮೊಣಕಾಲಿನವರೆಗೂ ಜೋಲಾಡುತ್ತಿರುವ ವೀರಗಚ್ಚೆ, ವಂಕ್ಷಣದಿಂದ ಎರಡು ಹಂತದಲ್ಲಿ ಇಳಿಬಿದ್ದ ನೆರಗೆಯ ಕುಚ್ಚು, ಕಚ್ಚೆಯ ಮೇಲೆ ಜೋಡಿಸಿದ ಮುತ್ತಿನ ಮಣಿಸರ, ಕಟಿಬಂಧ, ಕಟಿಬಂಧಕ್ಕೆ ಸುತ್ತಲೂ ಜೋಲಾಡುವಂತೆ ಸಿಕ್ಕಿಸಿದ ಗೊಂಡೆಗಳು, ಕಂಠಿಹಾರು, ಮಣಿಮಾಲೆ, ಬಾಹುಬಂಧ, ಕಂಕಣ, ಕಾಲ್ಗಡಗ, ಕರ್ಣಕುಂಡಲ, ತಲೆಯ ಎಡಭಾಗದಲ್ಲಿ ಕಟ್ಟಿದ ವೀರಮುಡಿಗಳಿಂದ ಭೂಷಿತರಾಗಿದ್ದಾರೆ.

ಎರಡನೇ ಹಂತದಲ್ಲಿ ಕಾಳಗಿತನನ್ನು ಕುದರೆ ಸಾರೋಟಿನಲ್ಲಿ ಸ್ವರ್ಗಕ್ಕೆ ಕೊಂಡಯ್ಯುತ್ತಿರುವ ಅಪ್ಸರೆಯರಿಬ್ಬರ ಶಿಲ್ಪಗಳಿದ್ದು ಊರ್ಧ್ವಜಾನುಭಂಗಿಯಲ್ಲಿವೆ. ವೀರನ ಸುತ್ತಲೂ ಮಂಟಪದಂತಹ ಉಬ್ಬುಶಿಲ್ಪವಿದ್ದು, ಮಂಟಪಕ್ಕೆ ಎರಡೂ ಕಡೆ ಮುಂಗಾಲುಗಳನ್ನೆತ್ತಿ ನೆಗೆಯುತ್ತಿರುವ ಕುದರೆಗಳನ್ನು

ಕಟ್ಟಲಾಗಿದೆ. ಮಂಟಪದೊಳಗೆ ಊರ್ಧ್ವಜಾನುಭಂಗಿ ಹಾಗೂ ಅಭಯ ಮುದ್ರೆಯಲ್ಲಿರುವ ವೀರಗಲ್ಲಿನ ನಾಯಕ ಕಾಳಗಿತನ ಶಿಲ್ಪವಿದ್ದು, ವೀರಗಚ್ಚೆ, ಕಟಿಬಂಧ, ಕಾಲ್ಗಡಗ, ಕಂಕಣ, ಬಾಹುಬಂಧ, ಕಂಠಿಹಾರ, ಮಣಿಹಾರ, ಕರ್ಣಕುಂಡಲ, ತಲೆಯ ಎಡಭಾಗದಲ್ಲಿ ಕಟ್ಟಿದ ವೀರಮುಡಿಗಳಿಂದ ಭೂಷಿತನಾಗಿದ್ದಾನೆ. ವೀರನ ಎಡ ಬಲದಲ್ಲಿರುವ ಅಪ್ಸರೆಯರಿಬ್ಬರು ಎರಡೂ ಕೈಗಳಲ್ಲೂ ದಂಡವನ್ನು ಹಿಡಿದಿದ್ದು, ಮೊಣಕಾಲಿನವರೆಗೆ ಧರಿಸಿದ ಲಂಗದಂತಹ ಉಡುಗೆ, ಪತ್ರಕುಂಡಲ, ಕಂಠಿಹಾರ, ಬಂಧುರಾ, ಕಂಕಣ, ಬಾಹುಬಂಧ, ಕಾಲ್ಗಡಗ, ಕಿರೀಟಮಕುಟಗಳಿಂದ ಭೂಷಿತರಾಗಿದ್ದಾರೆ.

ಮೂರನೇ ಹಂತದ ಮಧ್ಯಭಾಗದಲ್ಲಿ ಶಿವಲಿಂಗದ ಶಿಲ್ಪವಿದ್ದು, ಅದರ ಮೇಲೆ ಯಾಳಿಯನ್ನು ಶಿಲ್ಪಿಸಲಾಗಿದೆ. ಇದರ ಬಲಭಾಗದಲ್ಲಿ ಪದ್ಮಾಸನ ಹಾಗೂ ಅಂಜಲಿ ಮುದ್ರೆಯಲ್ಲಿರುವ ಕಾಳಗಿತನ ಶಿಲ್ಪವಿದ್ದು, ಕಂಕಣ, ಬಾಹುಬಂಧ (ಬಲಗೈಯಲ್ಲಿ ಒಂದು ಎಡಗೈಯಲ್ಲಿ ಎರಡು), ಕಂಠಿಹಾರ, ಕರ್ಣಕುಂಡಲ, ಎಡ ಮುಡಿಗಳಿಂದ ಭೂಷಿತನಾಗಿದ್ದಾನೆ. ಬಲ ಭಾಗದಲ್ಲಿ ಗಂಟೆ ಹಿಡಿದು ಹಾಗೂ ಶಂಖ ಊದುತ್ತಿರುವ ಯತಿ ಹಾಗೂ ನಂದಿಯ ಶಿಲ್ಪಗಳಿವೆ. ನಂದಿಯ ಕೊರಳಲ್ಲಿ ಗೆಜ್ಜೆಸರ, ಘಂಟೆ, ಬೆನ್ನ ಮೇಲೆ ಗೌನುಗಳನ್ನು ಶಿಲ್ಪಿಸಲಾಗಿದೆ.[6] ಹೀಗೆ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಕಂಡುಬರುವ ಊರುಳುವಿನ ವೀರಗಲ್ಲು ಶಾಸನಗಳನ್ನು ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಕೊನೆಟಿಪ್ಪಣಿಗಳು**

1. ಮಂಜುನಾಥ್ ಸಿ .ಯು. (2012). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. ಚಿತ್ಕಲಾ ಪ್ರಕಾಶನ, ಕುಪ್ಪಂ.
2. ಚಿದಾನಂದಮೂರ್ತಿ ಎಂ. (2002). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.
3. ಎ.ಕ. ಸಂ–3, ಹೆ.ಕೋ. 23.
4. ಎ.ಕ. ಸಂ–3, ಹೆ.ಕೋ. 7
5. ಎ.ಕ. ಸಂ–3, ಹೆ.ಕೋ. 140
6. ಎ.ಕ. ಸಂ–3, ಹೆ.ಕೋ. 137

**ಪರಾಮರ್ಶನ ಗ್ರಂಥಗಳು**


- ಗಿರಿಗೌಡ ನೀ. (2011). ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್, ಪರಿಶ್ರೀ ಮುದ್ರಾಣಾಲಯ, ಬೆಂಗಳೂರು.
- ಚಿದಾನಂದಮೂರ್ತಿ. ಎಂ. (2002). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.
- ನಾಯಕ. ಹಾ. ಮಾ. (1974). ಎಪಿಗ್ರಾಫಿಯ ಆಫ್ ಕರ್ನಾಟಕ– ಸಂ. 03. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
- ಮಂಜುನಾಥ್ ಸಿ. ಯು. (2012). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. ಚಿತ್ಕಲಾ ಪ್ರಕಾಶನ, ಕುಪ್ಪಂ.